ದಿನಾಂಕ 03.08.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ.ಎಂ ಜಿ ವಕೀಲರಿಂದಃ

ನನ್ನ ಗಂಡ ಹಾಗೂ ರಾಜುಗೌಡ ಇಬ್ಬರು ಸಂಬಂಧಿಕರು ಎಂದರೇ ಇಲ್ಲ. ನಾನು ಮನೆ ಕಟ್ಟಿಕೊಂಡಿರುವ ಸ್ವತ್ತು ರಾಜುಗೌಡರಿಗೆ ಸೇರಿದ್ದು ಎಂದರೇ ಇಲ್ಲ. ನನ್ನ ಅತ್ತೆ ಬರೆದುಕೊಟ್ಟಿದ್ದಾರೆ. ನನ್ನ ಅತ್ತೆಯವರು ರಾಜುಗೌಡರಿಗೆ ಮನೆ ಕಟ್ಟಲು ಜಾಗ ಇಲ್ಲ. ನಿಮ್ಮದೇ ಸ್ವತ್ತು ಮನೆ ಕಟ್ಟಲು ಜಾಗ ಕೊಡಿ ಎಂದು ಕೇಳಿದ್ದರು ಅದಕ್ಕೆ ರಾಜುಗೌಡರು ಜಾಗ ಕೊಟ್ಟಾಗ ರಾಜುಗೌಡರವರ ಅಪ್ಪಣೆ ಮೇರೆಗೆ ನಮ್ಮ ಅತ್ತೆಯವರು ಶೆಡ್ಡನ್ನು ತೆಗೆದು ಮನೆ ಕಟ್ಟಿದ್ದರು ಎಂದರೇ ಹೌದು. ನಮ್ಮ ಅತ್ತೆಯವರು ರಾಜುಗೌಡರವರಿಗೆ ನೀವು ಕೇಳಿದ ಜಾಗವನ್ನು ಬಿಟ್ಟು ಕೊಡುತ್ತೇವೆ ಎಂದು ಹೇಳಿದ್ದರು ಎಂದರೇ ಇಲ್ಲ. 2020 ರಲ್ಲಿ ಕೋವೀಡ್ ಬಂದಿರುವ ವಿಚಾರ ನನಗೆ ಗೊತ್ತು. ಆ ಸಮಯದಲ್ಲಿ ರಾಜುಗೌಡರವರ ಮಕ್ಕಳು ಊರಿಗೆ ಬರದ ಕಾರಣ ಆ ಸಮಯದಲ್ಲಿ ಶಾಶ್ವತವಾಗಿ ಕಾಂಕ್ರೀಟ್ ಕಟ್ಟಡದ್ದೀವಿ ಎಂದರೇ ಹೌದು. ಅದನ್ನು ನಾವೇ ಸ್ವಂತ ಕಟ್ಟಿ ವಾಸ ಇದ್ದೇವೆ. ಆ ಸಮಯದಲ್ಲಿ ರಾಜುಗೌಡರವರ ಮಕ್ಕಳು ತಡೆದಿದ್ದಾರೆ ಎಂದರೇ ಇಲ್ಲ.

2. ಮನೆ ಕಟ್ಟಿದ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದೀರಿ ಎಂದರೇ ಗೊತ್ತಿಲ್ಲ. ಆ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದೀರಿ ಎಂದರೇ ಗೊತ್ತಿಲ್ಲ. ಈ ಆ ಆಸ್ತಿಯ ಮಾಲೀಕರ ಎಂದರೇ ಹೌದು. ಅದು ನನ್ನ ಸ್ವಂತ ಆಸ್ತಿ. ಪ್ರತಿವಾದ ಪತ್ರದಲ್ಲಿರುವ ವಿಚಾರ ನನಗೆ ಗೊತ್ತು. ಆ ಆಸ್ತಿಯನ್ನು ದಿ 09.12.1976 ರಲ್ಲಿ ಖರೀದಿ ಮಾಡಿದ್ದೇವೆ ಎಂದು ತಿಳಿಸಿದ್ದು ಅದು ಸತ್ಯವಾ ಅಥವಾ ಸುಳ್ಳು ಎಂದರೇ ಅದು ಗೊತ್ತಿಲ್ಲ. ದಿ 09.12.1976 ರ ದಾಖಲೆ ನಿಮ್ಮ ಹತ್ತಿರ ಇದೆಯಾ ಎಂದರೇ ಹೌದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೇ ಹೌದು. ಆ ದಾಖಲೆ ಇದೆಯಾ ಎಂದು ಸಾಕ್ಷಿಗೆ ನಿಡಿ-3 ನ್ನು ತೋರಿಸಲಾಗಿ ಹೌದು ಎಂದು ಒಪ್ಪಿರುತ್ತಾರೆ. ಪುಟ್ಟ ಸ್ವಾಮಯ್ಯ ರವರಿಗೆ ನೀವು ಖರೀದಿ ಮಾಡಿರುವ ಸ್ವತ್ತು ಯಾವ ರೀತಿ ಬಂದಿದೆ

ಎಂದು ತಿಳಿದುಕೊಂಡಿದ್ದೀರ ಎಂದರೇ ಇಲ್ಲ. ಪುಟ್ಟ ಸ್ವಾಮಯ್ಯ ರವರಿಂದ ಖರೀದಿ ಮಾಡುವ ಪೂರ್ವದಲ್ಲಿ ಅಳತೆ ಮಾಡಿ ಖರೀದಿ ಮಾಡಿದ್ದೀರಿ ಎಂದರೇ ಹೌದು. ನಿಡಿ-3 ರಲ್ಲಿ ಪುಟ್ಟ ಸ್ವಾಮಯ್ಯ ರವರಿಗೆ ಆ ಸ್ವತ್ತು ಯಾವ ರೀತಿ ಬಂತು ಎಂದು ತಿಳಿಸಿಲ್ಲ ಎಂದರೇ ಅದು ನನಗೆ ಗೊತ್ತಿಲ್ಲ. ಪುಟ್ಟ ಸ್ವಾಮಯ್ಯ ಗೂ ದಾವಾ ಸ್ವತ್ತಿಗೂ ಯಾವುದೇ ರೀತಿ ಸಂಬಂದ ಇಲ್ಲ. ಪುಟ್ಟ ಸ್ವಾಮಯ್ಯ ರವರಿಗೆ ಸೇರಿದ್ದು ಅಲ್ಲ ಎಂದರೇ ನನಗೇ ಗೊತ್ತಿಲ್ಲ. ಆ ದಾವಾ ಸ್ವತ್ತಿನ ಪೂರ್ವಕ್ಕೆ - ಹಲುಗೂರು ಚನ್ನಪಟ್ಟಣ ರಸ್ತೆ ಇದೆ ಎಂದು, ಪಶ್ಚಿಮಕ್ಕೆ - ತಿಬ್ಬೇಗೌಡ ಶಿವಲಿಂಗಯ್ಯರವರ ಸ್ವತ್ತು ಇದೆ ಎಂದು, ಉತ್ತರಕ್ಕೆ - 1ನೇ ವಾದಿಯ ಸ್ವತ್ತು ಇದೇ ಎಂದು, ದಕ್ಷಿಣಕ್ಕೆ - 4ನೇ ವಾದಿಯ ಸ್ವತ್ತು ಇದೇ ಎಂದರೇ ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ.

3. ದಾವಾ ಸ್ವತ್ತಿನ ಮಾಲೀಕರು ಅಲ್ಲದೆ ರೆವಿನ್ಯೂ ಅಧಿಕಾರಗಳ ಜೊತೆ ಸಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೇ ನಮಗೆ ಏನು ಗೊತ್ತಿಲ್ಲ. ದಾಖಲೆಗಳನ್ನು ಮಾಡಿಕೊಳ್ಳುವಾಗ ರೆವಿನ್ಯೂ ಅಧಿಕಾರಗಳ ಮುಂದೆ ಪುಟ್ಟ ಸ್ವಾಮಯ್ಯರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ತಿಳಿಸಿಲ್ಲ ಎಂದರೇ ಇಲ್ಲ. ನಾವು ದಾವಾ ಸ್ವತ್ತಿನ ಮಾಲೀಕರು ಅಲ್ಲದೇ ಇದ್ದರು ಅಕ್ರಮವಾಗಿ ಮನೆ ಕಟ್ಟಿ ಕೊಂಡು ವಾದಿಗಳಿಗೆ ತೊಂದರೇ ಕೊಡುವ ಉದ್ದೇಶದಿಂದ ಮನೆ ಕಟ್ಟಿಕೊಂಡು ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದೀವೆ ಎಂದರೇ ಸರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ) ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)